ಜಡೆಯ ಆರಿಸಿಕೊಂಡವರಿಗೆ ಬರೀ ಕಷ್ಟವೇ, ಒಳ್ಳೆ ಗಂಡ ಸಿಕ್ರೂ ಸುಖವೇನೂ ಇರಲ್ಲ. ಬೇಕಾದ್ರೆ ಸೀತೆ, ದ್ರೌಪದಿಯರ ನೋಡು, ಜೀವನಪೂರ್ತಿ ಕಷ್ಟವೇ ಅಂತ ಅಜ್ಜಿ ಕಥೆ ಹೇಳ್ತಿದ್ರು' ಅಂತ ನನ್ನ ಗೆಳತಿ ನಕ್ಕರು. ನನಗೂ ಇರಬಹುದೇನೋ ಅನ್ನಿಸಿತು. ಬೇಕಾದ್ರೆ ನೋಡಿ, ನಮ್ಮ ಕಾಲೇಜ್ ದಿನಗಳಲ್ಲಿ ಸ್ಟೈಲ್ ಆಗಿ ಹೇರ್ ಕಟ್ ಮಾಡಿಕೊಂಡಿದ್ದ ಸುಂದರಿಯರಿಗೆ ಲೈನ್ ಹೊಡೆಯುವಷ್ಟು ಹುಡುಗರು, ಉದ್ದ ಜಡೆ ಚೆಲುವೆಯರಿಗೆ ಹೊಡೀತಿರಲಿಲ್ಲ.

ಈಗೀಗ ಉದ್ದ ಜಡೆಯವರು ಕಾಣ ಸಿಗೋದು ಅಪರೂಪದಲ್ಲಿ ಅಪರೂಪ. ಎಲ್ಲಾ ಕೆಲಸ ವೇಗದಲ್ಲಿ ಸಾಗಬೇಕಾದ ಈ ಕಾಲದಲ್ಲಿ ಉದ್ದ ಜಡೆ ಬೆಳೆಸಿಕೊಂಡು, ಅದಕ್ಕೆ ಎಣ್ಣೆ ಸೀಗೆ ಕಾಣಿಸಿಕೊಂಡು, ಸಿಕ್ಕಿಲ್ಲದೆ ಬಾಚಿಕೊಂಡು ಕಾಲಹರಣ ಮಾಡುವಷ್ಟು ಪುರುಸೊತ್ತು ಯಾರಿಗಿದೆ? ಎಲ್ಲರೂ ಚಿಕ್ಕದಾಗಿ ಕೂದಲು ಕತ್ತರಿಸಿಕೊಂಡು, ಶಾಂಪೂನಿಂದ ಸುಲಭವಾಗಿ ತೊಳೆದುಕೊಂಡು ಆರಾಮಾಗಿ ನಿಭಾಯಿಸುವವರೆ! ನಾನೂ ಕೂಡ ಚಿಕ್ಕದಾಗಿ ಕೂದಲು ಕತ್ತರಿಸಿಕೊಂಡಿದ್ದರೂ ಸೀಗೆಪುಡಿ ಬಳಸುವುದು ಮಾತ್ರ ನಿಲ್ಲಿಸಿಲ್ಲ. ಚಿಕ್ಕಂದಿನಿಂದ ಬಳಸಿ ಬಳಸಿ ತಲೆ ಅದಕ್ಕೆ ಒಗ್ಗಿ ಹೋಗಿದೆ. ಏನಾದರೂ ಶಾಂಪೂ ಬಳಸಿದರೆ ಮುಗೀತು, ಬಾಚುವಾಗ ಬತ್ತಿ ಬತ್ತಿ ಕೂದಲು ಉದುರಿಹೋಗುತ್ತದೆ. ವಯಸ್ಸಾಗುತ್ತಾ ಹೋದಂತೆಲ್ಲ ಉದುರುವುದು ಇನ್ನೂ ಹೆಚ್ಚಾಗಿ ಅದನ್ನು ಕಡಿಮೆ ಮಾಡಲು ಮಾಡುವ ಕಸರತ್ತು ಅಷ್ಟಿಷ್ಟಲ್ಲ. ಉದುರುವುದರ ಜೊತೆಗೆ ಕೂದಲು ಹಣ್ಣಾಗುವುದು ಕೂಡ ಶುರುವಾಗಿ ಬಿಟ್ಟರೆ ಅದು ಗಾಯದ ಮೇಲೆ ಬರೆ ಎಳೆದಂತೆಯೇ ಸರಿ.

ಒಂದು ನಾಲ್ಕೈದು ವರ್ಷಗಳ ಹಿಂದೆ ತಲೆಗೂದಲು ಹೇಗೆ ಉದುರಲು ಶುರುವಾಯಿತು ಅಂದ್ರೆ, ಎಷ್ಟೊಂದು ಬಾರಿ ತಲೆ ಬಾಚಿಯಾದ ನಂತರ ಬಾಚಣಿಗೆ ನೋಡಲು ಧೈರ್ಯವೇ ಸಾಲುತ್ತಿರಲಿಲ್ಲ. ಬಾಚುವಾಗ ಕಾಲ ಬಳಿ ಉದುರಿ ಬೀಳುತ್ತಿದ್ದ ಕೂದಲ ರಾಶಿ ಅಷ್ಟಿಷ್ಟಲ್ಲ. ಉದುರಿ ಉದುರಿ ತಲೆಬುರುಡೆ ಅಲ್ಲಲ್ಲಿ ಕಾಣಲಾರಂಭಿಸಿ ನನಗಂತೂ ಯೋಚಿಸಿ ಚಿಂತಿಸಿ ಸಾಕಾಗಿ ಹೋಯಿತು.

ಇನ್ನು ಕಷ್ಟಕಾಲದಲ್ಲಿ ಗೆಳತಿಯರಲ್ಲದೆ ಇನ್ನಾರು ಕೈ ಹಿಡಿದಾರು? ನಾನಂತೂ ಇರೋ ಬರೋ ಗೆಳತಿಯರನ್ನೆಲ್ಲಾ ಕೂದಲುದುರುವ ಸಮಸ್ಯೆಗೆ ಪರಿಹಾರ ಕೇಳಿ, ಕೇಳಿದವರೆಲ್ಲ ತಲೆಗೊಂದು ಐಡಿಯಾ ಕೊಟ್ಟರು. ಅವರಲ್ಲಿ ಹೆಚ್ಚಿನ ಶೇಕಡಾವಾರು ಜನ ಎಣ್ಣೆ ಮಸಾಜ್ ಸಲಹೆ ಕೊಟ್ಟು ಅದನ್ನೇ ಮೊದಲು ಪ್ರಯೋಗಿಸುವ ಎಂದುಕೊಂಡೆ. ಬಿಸಿ ಎಣ್ಣೆ ಮಸಾಜ್ಗೆ ಎಂದು, ಕರಿಬೇವಿನ ಎಣ್ಣೆ, ನೆಲ್ಲಿಕಾಯಿ ಎಣ್ಣೆ, ಆಲಿವ್ ಎಣ್ಣೆ, ಬಾದಾಮಿ ಎಣ್ಣೆ ಅಂತೆಲ್ಲ ತಂದು, ಬೆಚ್ಚಗೆ ಮಾಡಿ ಹತ್ತಿಯುಂಡೆ ಅದ್ದಿ, ಕೂದಲ ಬುಡಕ್ಕೆ ಇಳಿಯುವಂತೆ, ತಲೆಗೂದಲು ಬಗೆದು ಬಗೆದು ತೈಲ ಉಜ್ಜಿ ನೋಡಿದೆ. ಮೊಟ್ಟೆಯ ಬಿಳಿ, ತೆಂಗಿನ ಹಸಿ ಹಾಲು, ಈರುಳ್ಳಿ ರಸ, ಮೊಸರು ಇತ್ಯಾದಿಗಳನ್ನೆಲ್ಲಾ ಲೇಪಿಸಿದೆ. ಇವೆಲ್ಲಾ ಸೇರಿ



ಮಕ್ಕಳು ಹತ್ತಿರವೂ ಸುಳಿಯದಷ್ಟು ತಲೆ ಕುವಾಸನೆ ಬೀರಲು ಶುರುವಾಗಿದ್ದು ಬಿಟ್ಟರೆ ತಲೆಗೂದಲು ಉದುರುವುದು ಮಾತ್ರ ನಿಲ್ಲಲಿಲ್ಲ.

ಒಮ್ಮೆ ಹೀಗೆ ನೆರೆಮನೆಯೊಂದಕ್ಕೆ ಅರಿಶಿನ ಕುಂಕುಮಕ್ಕೆಂದು ಹೋಗಿದ್ದಾಗ ನಮ್ಮ ಪಕ್ಕದ ಮನೆಯಾಕೆ, 'ಇದ್ಯಾಕ್ರಿ,ನಿಮ್ಮ ತಲೆಗೂದಲೆಲ್ಲ ಇಷ್ಟೊಂದು ಉದುರಿ ಬತ್ತಿಯಷ್ಟಾಗಿ ಬಿಟ್ಟಿದೆಯಲ್ಲ' ಎಂದು ಕೇಳಿದಾಗ ನನ್ನ ಕಷ್ಟವನ್ನೆಲ್ಲ ಹೇಳಿಕೊಂಡೆ.

ಕೇಳಿಸಿಕೊಂಡ ನಮ್ಮ ಪಕ್ಕದ ಮನೆಯಾಕೆ, 'ರೀ, ಸಿಂಚು ಪಾರ್ಲರ್ ಹತ್ರ ಇರೋ ಸ್ಕಿನ್ ಡಾಕ್ಟ್ರು ಬಹಳ ಚೆನ್ನಾಗಿ ನೋಡ್ತಾರಂತೆ. ನನ್ ತಂಗಿ ಮುಖದ ಸನ್ ಬರ್ನ್ ಎಲ್ಲಾ ಹೋಗೋ ಹಾಗೆ ಮಾಡಿದ್ದಾರೆ. ಒಂದ್ ಸಾರಿ ಹೋಗಿ ಬನ್ನಿ' ಅಂತ ಹೇಳಿದ್ರು. ಸರಿ ಅಪಾಯಿಂಟ್ಮೆಂಟ್ ತೊಗೊಂಡು ಕ್ಲಿನಿಕ್‌ಗೆ ಹೋಗಿ ವೈದ್ಯರ ಕಾಯ್ದು ಕುಳಿತೆ. ಸ್ವಲ್ಪ ಹೊತ್ತಲ್ಲೇ ವೈದ್ಯರು ಬಂದಾಗ ನೋಡಿದರೆ, ಅವರ ತಲೆ ಮಿರ ಮಿರ ಮಿಂಚುತ್ತಿದೆ! ಛೇ, ತನ್ನ ತಲೆಗೂದಲನ್ನು ಕಾಪಾಡಿಕೊಳ್ಳದ ವೈದ್ಯರು ನನಗೇನು ಚಿಕಿತ್ಸೆ ಕೊಟ್ಟಾರು ಅನಿಸಿದರೂ, 'ಪುರುಷ ಗೈನಕಾಲಜಿಸ್ಟ್ ಇರೋದಿಲ್ಲವೆ, ಹಾಗೆ ಚಾಣೆ ಮಂಡೆ ಚರ್ಮ ವೈದ್ಯರು ಇರಬಾರದೇ' ಅನ್ನೋ ಉದಾರ ಮನಸ್ಸಿನಿಂದ ಸಮಾಧಾನ ತಂದುಕೊಂಡೆ.

ಚರ್ಮವೈದ್ಯರ ಬಳಿ ನನ್ನ ಸಮಸ್ಯೆಯನ್ನೆಲ್ಲ ಹೇಳಿಕೊಂಡೆ. ಪುಣ್ಯಾತ್ಮನಿಗೆ ತನಗೇ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಂಡಿಲ್ಲದ ಬೇಸರವೋ ಏನೋ – ಉದಾಸೀನದಲ್ಲೇ ಏನೇನೋ ಮಲ್ಟಿ ವಿಟಮಿನ್ ಟ್ಯಾಬ್ಲೆಟ್ ಕೊಟ್ಟು, ಹಚ್ಚಲು ಎಂತಹದೋ ಒಂದು ತೈಲ ಕೊಟ್ಟು ಕಳುಹಿಸಿದರು.

ಆ ತೈಲ, ಟ್ಯಾಬ್ಲೆಟ್‌ಗಳೂ ಕೂಡ ತಮ್ಮ ಗುರಿ ಸಾಧನೆಯಲ್ಲಿ ವಿಫಲವಾದವು. ಅದನ್ನು ನಾನು ಮುಂಚೆಯೇ ಯೋಚಿಸಿದ್ದೆ ಬಿಡಿ.

ಹಚ್ಚುವ, ಲೇಪಿಸುವ ಉಪಾಯಗಳು ಕೈ ಕೊಟ್ಟಮೇಲೆ ಆಧುನಿಕ ಬೃಹಸ್ಪತಿ ಗೂಗಲನ ಮೊರೆಹೋದೆ. ಅಲ್ಲಿ ಯೂಟ್ಯೂಬ್‌ನ ಒಂದು ವಿಡಿಯೊದಲ್ಲಿ ಓರ್ವ ಪೌಷ್ಟಿಕಾಂಶ ತಜ್ಞೆ, 'ಆಹಾರ ಹೇಗೆ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ, ನಮ್ಮ ಚರ್ಮ, ಹಲ್ಲು, ಕೂದಲು ಹೇಗೆ ಒಳ್ಳೆಯ ಆಹಾರದ ಮೇಲೆ ಅವಲಂಬಿತವಾಗಿರುತ್ತವೆ, ಉತ್ತಮ ಕೇಶಪೋಷಣೆಗೆ ಯಾವ ಯಾವ ಪ್ರೊಟೀನ್ ಯುಕ್ತ ಕಾಳುಗಳ ಸೇವಿಸಬೇಕು' ಇತ್ಯಾದಿ ಇತ್ಯಾದಿ ರಸವತ್ತಾಗಿ ಕೊರೆದಳು. ಅವಳು ಹೇಳಿದ ಹಾಗೆ ಮಾರನೇ ದಿನದಿಂದಲೇ ನನ್ನ ಕಾರ್ಬೋಹೈಡ್ರೇಟ್‌ಗಳ ಸೇವನೆ ಕಡಿತಗೊಳಿಸಿ, ಪ್ರೊಟೀನ್ ಒಳಸುರಿ ಹೆಚ್ಚು ಮಾಡುವ ಸಲುವಾಗಿ, ಎಲ್ಲಾ ವಿಧದ ಕಾಳುಗಳ, ಹಾಲಿನ, ಮೊಟ್ಟೆ ಮಾಂಸದ ಸೇವನೆ ಹೆಚ್ಚಾಯಿತು. ಆದರೆ ಇದರಿಂದ ವಾತ ಸಮಸ್ಯೆ ಶುರುವಾಗಿ ಕೈ ಕಾಲುಗಳೆಲ್ಲ ಹಿಡಿದುಕೊಳ್ಳಲು ಬೇರೆ ಶುರುವಾಯಿತು. ಅಪಾನವಾಯುವಿನ ಬೋನಸ್ ಬೇರೆ. ಈ ಹಿಂಸೆಯಲ್ಲಿ 'ತಲೆಗೂದಲು ಹೆಚ್ಚು ಬೆಳೆದರೂ ಅಕ್ಕಪಕ್ಕ ಯಾರೂ ಕೂರದಂತಹ ಪರಿಸ್ಥಿತಿ ತಂದುಕೊಳ್ಳೋದು ಬೇಡ ದೇವಾ' ಅನ್ನಿಸಿ, ನನ್ನ ಪ್ರೊಟೀನ್ ಡಯಟ್ ನಿಲ್ಲಿಸಿ ತೆಪ್ಪಗಾದೆ.

ನನ್ನ ಪರಿಪಾಟಲುಗಳ ಗಮನಿಸುತ್ತಿದ್ದ ನನ್ನ ಮಗಳು, 'ಅಮ್ಮ ಮೊದಲು ಕೂದಲು ಉದುರುತ್ತೆ ಅನ್ನೋದರ ಬಗ್ಗೆ ಚಿಂತೆ ಮಾಡೋದು ನಿಲ್ಲಿಸು. ಆಗ ತಾನೇ ತಾನಾಗಿ ಅರ್ಧ ಸಮಸ್ಯೆ ಕಡಿಮೆಯಾಗುತ್ತೆ. ವಯಸ್ಸಾದಂತೆ ಕೂದಲು ಕಡಿಮೆಯಾಗೋದು, ತಲೆ ಹಣ್ಣಾಗೋದು ಎಲ್ಲರಿಗೂ ಸಹಜ. ಆರಾಮಾಗಿ ಎಲ್ಲವೂ ಬಂದಂತೆ ಸ್ವೀಕರಿಸುವುದು ಬಿಟ್ಟು ಯೋಚನೆ ಮಾಡಿ ಕೊರಗಬೇಡ, ಕಣ್ಣು ತುಂಬಾ ನಿದ್ದೆ ಮಾಡು, ಎಲ್ಲಾ ಸರಿ ಹೋಗುತ್ತೆ' ಎಂದಾಗ, ಮಗಳು ಎಷ್ಟು ಬೇಗ ದೊಡ್ಡವಳಾಗಿ ಬಿಟ್ಟಳಲ್ಲ ಎನಿಸಿಬಿಟ್ಟಿತು.

ಈಗ ನಾನು ತಲೆ ಬಾಚಿಯಾದ ಮೇಲೆ ಅಪ್ಪಿತಪ್ಪಿಯೂ ಬಾಚಣಿಗೆಯನ್ನಾಗಲಿ, ಕಾಲ ಬುಡವನ್ನಾಗಲಿ ನೋಡದೆ, ನೋಡಿದರೂ ಸುಮ್ಮನೆ ಉದುರಿರುವ ಕೂದಲನ್ನು ಉಂಡೆ ಕಟ್ಟಿ ಕಸದ ಬುಟ್ಟಿಗೆ ಎಸೆದು ತೆಪ್ಪಗಾಗುತ್ತೇನೆ. ಅದೇನೋ ಹೇಳ್ತಾರಲ್ಲ 'ಹೊಟ್ಟೆ ಬರುತ್ತೆ, ಹೋಗಲ್ಲ; ಕೂದಲು ಹೋಗುತ್ತೆ, ಬರಲ್ಲ'. ಆ ಸತ್ಯವನ್ನ ಮನಸಾರೆ ಒಪ್ಪಿಕೊಂಡು ಬಿಟ್ಟಿದ್ದೇನೆ.

ಕೂದಲು ಉದುರುವುದು, ಹಣ್ಣಾಗುವುದು, ಜಾರಿಹೋಗುತ್ತಿರುವ ತಾರುಣ್ಯ, ತೆವಳುತ್ತಾ ತೆವಳುತ್ತಾ ನಾವು ವೃದ್ಧಾವಸ್ಥೆಗೆ ಸಮೀಪಿಸುತ್ತಿರುವುದರ ಸಂಕೇತ. ಮುಪ್ಪು ಮತ್ತು ಸಾವಿಗೆ ಮನುಷ್ಯರು ಹೆದರುವಷ್ಟು ಬಹುಶಃ ಇನ್ಯಾವುದಕ್ಕೂ ಹೆದರುವುದಿಲ್ಲವೇನೋ. ಹಾಗಾಗಿಯೇ ಅವುಗಳ ತಡೆಯಲು ಏನೆಲ್ಲಾ ಕಸರತ್ತು ಮಾಡುತ್ತಾರೆಂದು ಅನಿಸುತ್ತದೆ. ಮಾನವ ಏನೇ ಪ್ರಯತ್ನಪಟ್ಟರೂ ವೃದ್ಧಾಪ್ಯ– ಸಾವನ್ನು ಗೆಲ್ಲಲು ಸಾಧ್ಯವಾಗಿಲ್ಲ. ಆದರೂ ಅವುಗಳ ಗೆಲ್ಲಲು ಮನುಷ್ಯ ತನ್ನ ಪ್ರಯತ್ನವನ್ನೇನೂ ನಿಲ್ಲಿಸಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**